# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 215 |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10.12.2024 |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ವಿಜಯಪುರ ವಿಮಾನ ನಿಲ್ದಾಣ ನಿರ್ಮಿಸಲು ಸರ್ಕಾರ ನೀಡಿರುವ ಒಟ್ಟು ಜಾಗವೆಷ್ಟು; ವಿಮಾನ ನಿಲ್ದಾಣ ನಿರ್ಮಿಸಲು ಜಾಗವನ್ನು ನೀಡಿದ ರೈತರಿಗೆ ಅಥವಾ ಅವಲಂಬಿತ ಕುಟುಂಬಗಳಿಗೆ ನೀಡಲಾದ ಪರಿಹಾರದ ಮೊತ್ತವೆಷ್ಟು; | ವಿಜಯಪುರ ವಿಮಾನ ನಿಲ್ದಾಣ ನಿರ್ಮಿಸಲು ಸುಮಾರು 727-01 ಎಕರೆ ಜಮೀನಿಗೆ ಕಲಂ 28(4)ರಡಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.<br><br>ಅಂತಿಮ ಅಧಿಸೂಚನೆಯಲ್ಲಿ ಒಳಗೊಂಡಿರುವ 727-01 ಎಕರೆ ಜಮೀನಿನ ಪೈಕಿ ಒಟ್ಟು 591-15 ಎಕರೆ ಜಮೀನಿಗೆ ಭೂದರ ನಿರ್ಧರಣಾ ಸಲಹಾ ಸಮಿತಿಯ ಶಿಫಾರಸ್ಸಿನಂತೆ ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ ರೂ.8.00 ಲಕ್ಷಗಳಂತೆ ಮತ್ತು ನೀರಾವರಿ ಜಮೀನಿಗೆ ರೂ.9.00 ಲಕ್ಷಗಳಂತೆ ಪರಿಹಾರ ಪಾವತಿಸಲು ದಿನಾಂಕ: 06.10.2008 ರಂದು ನಡೆದ ಕೆಐಎಡಿಬಿ ಮಂಡಳಿಯ 290ನೇ ಸಭೆಯಲ್ಲಿ ನಿರ್ಣಯಿಸಲಾಗಿದೆ. ಅದರಂತೆ 347-33 ಎಕರೆ ಸರ್ಕಾರಿ ಜಮೀನನ್ನು ಹೊರತುಪಡಿಸಿ, ಉಳಿಕೆ 379-08 ಎಕರೆ ಜಮೀನಿಗೆ ಪರಿಹಾರ ಪಾವತಿಸಲಾಗಿದೆ. |
| (ಆ) | ಈ ಕುಟುಂಬದ ಎಷ್ಟು ಜನರಿಗೆ ಉದ್ಯೋಗ ನೀಡಲಾಗಿದೆ; ನೀಡದಿದ್ದಲ್ಲಿ ಕಾರಣವೇನು; | ವಿಮಾನ ನಿಲ್ದಾಣ ಪ್ರಾರಂಭವಾದ ನಂತರ ಕ್ರಮ ಕೈಗೊಳ್ಳಲಾಗುವುದು. |
| (ಇ) | ಸರ್ಕಾರ ನೀಡಿರುವ ಜಾಗದಲ್ಲಿ ಸಂಪೂರ್ಣವಾಗಿ ಎಷ್ಟು ಬಳಕೆ ಮಾಡಲಾಗಿದೆ; ಬಳಕೆಯಾಗದೇ ಬಾಕಿ ಉಳಿದಿರುವ ಜಾಗವೆಷ್ಟು; | ಸರ್ಕಾರ ನೀಡಿರುವ 726-01 ಎಕರೆ ಜಾಗವನ್ನು ಸಂಪೂರ್ಣವಾಗಿ ಬಳಕೆ ಮಾಡಲಾಗಿದೆ. |
| (ಈ) | ವಿಜಯಪುರ ವಿಮಾನ ನಿಲ್ದಾಣದ ಕಾಮಗಾರಿಯು ತುಂಬಾ ನಿಧಾನಗತಿಯಲ್ಲಿ ನಡೆಯುತ್ತಿದ್ದು, ಯಾವ ಕಾಲಮಿತಿಯೊಳಗೆ ಸಂಪೂರ್ಣ ಕಾಮಗಾರಿಯನ್ನು ಮುಕ್ತಾಯಗೊಳಿಸಲಾಗುವುದು? | ವಿಜಯಪುರ ವಿಮಾನ ನಿಲ್ದಾಣದ Day VFR Operation ಕಾಮಗಾರಿಯು ಮುಕ್ತಾಯಗೊಂಡಿದ್ದು, ವಿಮಾನ ನಿಲ್ದಾಣಕ್ಕೆ ಪರವಾನಿಗೆ ಪಡೆಯುವ ಹಾಗೂ ಕಾರ್ಯಾಚರಣೆ ಪ್ರಾರಂಭಿಸುವ ದಿಶೆಯಲ್ಲಿ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗಿದೆ. ಉಪಕರಣಗಳು ಹಾಗೂ ಇತರೆ ಯಂತ್ರಗಳ ಅಳವಡಿಕೆ ಮತ್ತು ಪರೀಕ್ಷೆ ಜೊತೆಗೆ ಡಿ.ಜಿ.ಸಿ.ಎ ತಂಡದವರು ನೀಡಿರುವ ಸೂಚನೆಗಳಿಗೆ ಅನುಪಾಲನ ವರದಿ ಸಿದ್ಧಪಡಿಸಲಾಗುತ್ತಿದೆ. |

ಸಂಖ್ಯೆ: ಮೂಅಇ 206 ರಾಅಪಿ 2024

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು